# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:5004/2021** ಪ್ರಾಸಾ-7

ಚಾಸಾ-5

ದಿನಾಂಕ: 05-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಶಿವರಾಜು |
| ತಂದೆಯ / ಗಂಡನ ಹೆಸರು | ರಾಜಣ್ಣ |
| ವಯಸ್ಸು | 30 |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಶಿರಾ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ಮೂರು ವರ್ಷಗಳ ಹಿಂದೆ ನಾನು ವ್ಯವಸಾಯ ಬಿಟ್ಟು ಬೇರೆ ಕೆಲಸ ಮಾಡುತ್ತಿರಲಿಲ್ಲ. ಕೊಡಿಗೇನಹಳ್ಳಿ ಪೊಲೀಸರು ಒಂದು ವರೆ ವರ್ಷಗಳ ಹಿಂದೆ ಸಹಿ ಹಾಕಿಸಿದ್ದಾರೆ. ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ. ನಾನು ಕೇಳಿಲ್ಲ. ನ್ಯಾಯಾಲಯದ ಮುಂದೆ ಇರುವ 4 ನೇ ಆರೋಪಿ ಗೊತ್ತಿಲ್ಲ. ಆರೋಪಿ ವಿಕಾಸ ಗೊತ್ತಿಲ್ಲ. ಅವರನ್ನು ಈ ಹಿಂದೆ ಯಾವತ್ತೂ ನೋಡಿಲ್ಲ. ಅವರು ನಮ್ಮ ಜೊತೆ ಏನು ವ್ಯವಹಾರ ಮಾಡಿದ್ದಾರೆ ಎಂದು ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

2020 ನೇ ಇಸವಿಗಿಂತ ಮೂರು ವರ್ಷ ಮೊದಲು ನಾನು ಮಧುಗಿರಿ ಟೌನ್ ನಲ್ಲಿರುವ ಶ್ರೀನಿವಾಸ ವೈನ್ಸ ಅಂಗಡಿಯಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ದಿನಾಂಕ 24.09.2020 ರಂದು ರಾತ್ರಿ 08.00 ಗಂಟೆಗೆ ಒಂದು ಬೈಕಿನಲ್ಲಿ ಮೂರು ಜನ ವೈನ್ ಶಾಪಿಗೆ ಬಂದರು, ಇಬ್ಬರು ಬೈಕಿನಲ್ಲಿ ಕುಳಿತುಕೊಂಡು, ಒಬ್ಬ ವೈನ್ ಶಾಪಿಗೆ ಬಂದು ಶೌಚಾಲಯಕ್ಕೆ ಹೋಗಬೇಕು, ಎರಡು ಖಾಲಿ ಬಿಯರ್ ಬಾಟಲ್ ಕೊಡು ಎಂದು ಕೇಳಿದ, ನಾನು ಎರಡು ಖಾಲಿ ಬಿಯರ್ ಬಾಟಲ್ ಕೊಟ್ಟೆ ಎಂದರೆ ಸರಿಯಲ್ಲ.

ದಿನಾಂಕ 28.09.2020 ರಂದು ನಮ್ಮ ವೈನ್ ಶಾಪ್ ಬಳಿ ಪೊಲೀಸರು ಇಬ್ಬರು ವ್ಯಕ್ತಿಗಳನ್ನು ಕರೆದುಕೊಂಡು ಬಂದರು. ನಾನು ಅವರನ್ನು ನೋಡಿ ಗುರುತಿಸಿದೆ, ಒಬ್ಬನ ಫೋಟೋ ನೋಡಿ ಗುರುತಿಸಿದೆ. ಆ ಮೂರೂ ಜನ ದಿನಾಂಕ 24.09.2020 ರಂದು ರಾತ್ರಿ 08.00 ಗಂಟೆಗೆ ನಮ್ಮ ವೈನ್ ಶಾಪಿಗೆ ಬಂದವರಾಗಿದ್ದರು ಎಂದರೆ ಸರಿಯಲ್ಲ. ನನ್ನ ಎದುರು ಪೊಲೀಸರು ಆ ಇಬ್ಬರನ್ನು ವಿಚಾರಣೆ ಮಾಡಿದರು, ಆಗ ಅವರು ನನ್ನ ಬಳಿ ಪಡೆದ ಖಾಲಿ ಬಿಯರ್ ಬಾಟಲಿಗಳಲ್ಲಿ ಒಂದಕ್ಕೆ ಪೆಟ್ರೋಲ್ ತುಂಬಿ ಪೆಟ್ರೋಲ್ ಬಾಂಬ್ ತಯಾರಿಸಿ, ಕೊಡಿಗೇನಹಳ್ಳಿಯ ನಂದಿನಿ ವೈನ್ಸಗೆ ಹೋಗಿ, ಪೆಟ್ರೋಲ್ ಬಾಂಬ್‌ಗೆ ಬೆಂಕಿ ಹಚ್ಚಿ ಅದನ್ನು ನಂದಿನಿ ವೈನ್ಸಗೆ ಎಸೆದಿದ್ದೇವೆ ಎಂದು ಹೇಳಿದರು ಎಂದರೆ ಸರಿಯಲ್ಲ. ನಂದಿನಿ ವೈನ್ಸ ಮಾಲೀಕರಿಗೆ 1 ನೇ ಆರೋಪಿ ಹಣಕ್ಕಾಗಿ ಮತ್ತು ಮದ್ಯಕ್ಕಾಗಿ ಬೇಡಿಕೆ ಇಟ್ಟಿದ್ದು, ಕೊಡದೇ ಇದ್ದಾಗ ಆರೋಪಿ 2 ರಿಂದ 4 ರವರ ಮೂಲಕ ವೈನ್ಸ ಶಾಪಗೆ ಪೆಟ್ರೋಲ್ ಬಾಂಬ್ ಹಾಕಿದ್ದ ಎಂದು ಕೂಡ ಹೇಳಿದರು ಎಂದರೆ ಸರಿಯಲ್ಲ. ಪರಿಣಾಮವಾಗಿ ಗೋಪಾಲ ತೀವ್ರವಾಗಿ ಗಾಯಗೊಂಡಿದ್ದ ಮತ್ತು

ನಂದಿನಿ ವೈನ್ಸಗೆ ರೂ.20,000/- ನಷ್ಟ ಉಂಟು ಮಾಡಿದ್ದ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದೂ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 29.09.2020 ರಂದು ಈ ಬಗ್ಗೆ ಪೊಲೀಸರ ಮುಂದೆ ವಿವರವಾದ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿನಾಂಕ 29.09.2020 ರ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ.11 ಎಂದು ಗುರುತಿಸಲಾಯಿತು.

**ಪಾಟೀಸವಾಲು ಶ್ರೀ.ಎಲ್ .ಬಿ.ಆರ್. ವಕೀಲರಿಂದ 1 ನೇ ಆರೋಪಿ ಪರವಾಗಿ:-**

**ಗೈರು ಹಾಜರು.**

**ಪಾಟೀಸವಾಲು ಶ್ರೀ.ಪಿ.ಎನ್.ಆರ್. ವಕೀಲರಿಂದ 3 ನೇ ಆರೋಪಿ ಪರವಾಗಿ:-**

**ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.**

**ಪಾಟೀಸವಾಲು ಶ್ರೀ.ಆರ್.ಹೆಚ್. ವಕೀಲರಿಂದ 4 ನೇ ಆರೋಪಿ ಪರವಾಗಿ:-**

**ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**
**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**